# ಚೂಡಾಮಣಿಯಿಂದ
# ಕರ್ಣಾಭರಣಗಳವರೆಗಿನ ಅಲಂಕಾರಗಳು

## ಮನೋಗತ

ಇಂದಿಗೂ ಹಬ್ಬ, ಉತ್ಸವ ಮುಂತಾದವುಗಳ ಸಮಯದಲ್ಲಿ ಹಿಂದೂ ಸ್ತ್ರೀಯರು ಮೈತುಂಬ ಆಭರಣಗಳನ್ನು ಧರಿಸಿ ಶೃಂಗರಿಸಿಕೊಳ್ಳುತ್ತಾರೆ. ಆಭರಣಗಳಿಂದ ಸ್ತ್ರೀಯರ ಲಾವಣ್ಯವು ಇನ್ನೂ ಹೆಚ್ಚಿಗೆ ಅರಳುತ್ತದೆ. ವಿವಿಧ ರೀತಿಯ ಆಭರಣಗಳನ್ನು ಧರಿಸುವುದರ ಹಿಂದಿನ ಉದ್ದೇಶವು ಕೇವಲ ಸೌಂದರ್ಯವನ್ನು ಹೆಚ್ಚಿಸುವುದಾಗಿಲ್ಲ. ಹಿಂದೂ ಧರ್ಮದಲ್ಲಿ ಪ್ರತಿಯೊಂದು ಆಭರಣವನ್ನು ವಿಶಿಷ್ಟ ಸ್ಥಳದಲ್ಲಿ ಧರಿಸಲು ಹೇಳಿದುದರ ಹಿಂದೆ ಅರ್ಥಪೂರ್ಣ ಅಧ್ಯಾತ್ಮಶಾಸ್ತ್ರದ ದೃಷ್ಟಿಕೋನವಿದೆ. ಆ ದೃಷ್ಟಿಕೋನವನ್ನು ಈ ಗ್ರಂಥದಲ್ಲಿ ವಿವರಿಸಲಾಗಿದೆ.

ಆಭರಣಗಳು ಈಶ್ವರನ ಚೈತನ್ಯವನ್ನು ಸಂಗ್ರಹಿಸುತ್ತವೆ ಮತ್ತು ಕೆಟ್ಟ ಶಕ್ತಿಗಳಿಗೆ ತೊಂದರೆ ದಾಯಕವಾಗಿವೆ. ಆಭರಣಗಳನ್ನು ಧರಿಸುವುದರಿಂದ ಕೆಟ್ಟ ಶಕ್ತಿಗಳಿಂದಾಗುವ ತೊಂದರೆ ಗಳು ಕಡಿಮೆಯಾಗಿ ಶರೀರದಲ್ಲಿನ ಆಯಾಯ ಸ್ಥಳದಲ್ಲಿನ ಕಪ್ಪುಶಕ್ತಿಯು ನಾಶವಾಗುವುದರ ಜೊತೆಗೆ ಸಾತ್ತ್ವಿಕತೆಯೂ ಹೆಚ್ಚಾಗುತ್ತದೆ. ಆಭರಣಗಳನ್ನು ಧರಿಸುವುದರಿಂದಾಗುವ ಸೂಕ್ಷ್ಮ ಪರಿಣಾಮಗಳು ಸ್ಥೂಲಕಣ್ಣುಗಳಿಗೆ ಕಾಣಿಸುವುದಿಲ್ಲ, ಅದನ್ನು ಸೂಕ್ಷ್ಮದಲ್ಲಿ ಅನುಭವಿಸ ಬೇಕಾಗುತ್ತದೆ. ಸೂಕ್ಷ್ಮವನ್ನು ಅರಿಯುವ ಕ್ಷಮತೆಯಿರುವ ಸನಾತನದ ಕೆಲವು ಸಾಧಕಿಯರು ಈ ಸಂದರ್ಭದಲ್ಲಿ ಮಾಡಿದ 'ಸೂಕ್ಷ್ಮಪರೀಕ್ಷಣೆಗಳು' ಮತ್ತು ಚಿತ್ರಿಸಿದ 'ಸೂಕ್ಷ್ಮಜ್ಞಾನದ ಚಿತ್ರ'ಗಳನ್ನು ನೋಡಿದ ಬಳಿಕ ಆಭರಣಗಳನ್ನು ಧರಿಸುವುದರ ಮಹತ್ವವು ಮನಸ್ಸಿನಲ್ಲಿ ಇನ್ನೂ ಆಳವಾಗಿ ಮೂಡಬಹುದು. ಆಭರಣಗಳನ್ನು ಧರಿಸಿದ್ದರಿಂದ ಸಾಧಕಿಯರಿಗೆ ಬಂದಿರುವ ಅನುಭೂತಿ ಗಳಿಂದ ಆಭರಣಗಳ ಬಗೆಗಿನ ಶ್ರದ್ಧೆಯು ಹೆಚ್ಚಾಗುತ್ತದೆ.

ಆಭರಣಗಳನ್ನು ಧರಿಸುವುದರಿಂದ ಅಪೇಕ್ಷಿಸಿದ ಆಧ್ಯಾತ್ಮಿಕ ಲಾಭವು ಸಿಗಲು ಆಭರಣಗಳು ಸಾತ್ತ್ವಿಕವಾಗಿರುವುದು ಅವಶ್ಯಕವಾಗಿದೆ. ಆಭರಣಗಳ ಆಕಾರ ಮತ್ತು ಅವುಗಳ ಮೇಲಿನ ವಿನ್ಯಾಸ ಹಾಗೂ ಆಭರಣಗಳನ್ನು ಧರಿಸಿದ ವ್ಯಕ್ತಿಯು ಸಾತ್ತ್ವಿಕನಾಗಿದ್ದಲ್ಲಿ ಆಭರಣಗಳಿಂದ ಸಾತ್ತ್ವಿಕತೆ ಮತ್ತು ಚೈತನ್ಯವು ಹೇಗೆ ಪ್ರಕ್ಷೇಪಿತವಾಗುತ್ತದೆ ಎಂಬುದು ಈ ಗ್ರಂಥದಲ್ಲಿ ಕೊಟ್ಟಿರುವ ಕೆಲವು ಸೂಕ್ಷ್ಮದ ಪ್ರಯೋಗಗಳಿಂದ ಗಮನಕ್ಕೆ ಬರುತ್ತದೆ. ಸಾತ್ತ್ವಿಕ ಆಭರಣಗಳೊಂದಿಗೆ ತಾಮಸಿಕ ಆಭರಣಗಳನ್ನೂ ಗುರುತಿಸಲು ಸಾಧ್ಯವಾಗಬೇಕೆಂದು ಎರಡೂ ರೀತಿಯ ಆಭರಣಗಳ ಛಾಯಾಚಿತ್ರಗಳನ್ನು ಮತ್ತು 'ಸೂಕ್ಷ್ಮಪರೀಕ್ಷಣೆ'ಗಳನ್ನು ಈ ಗ್ರಂಥದಲ್ಲಿ ನೀಡಲಾಗಿದೆ.

ಆಭರಣಗಳನ್ನು ಧರಿಸುವುದರ ಮಹತ್ವವನ್ನು ಗಮನದಲ್ಲಿಟ್ಟುಕೊಂಡು, ಅದಕ್ಕನುಸಾರ ಕೃತಿಗಳನ್ನು ಮಾಡಿ ಅಂದರೆ ಆಭರಣಗಳನ್ನು ಧರಿಸಿ ಈಶ್ವರನ ಸಮೀಪಕ್ಕೆ ಹೋಗುವ ಮಾರ್ಗವು ಇನ್ನಷ್ಟು ಸುಗಮವಾಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ.

**- ಸಂಕಲನಕಾರರು**

---

ಪುಟ ೨೫ ರಲ್ಲಿ ನೀಡಿದ 'ಸ್ತ್ರೀಯರು ಆಭರಣಗಳನ್ನು ಧರಿಸುವುದರ ಹಿಂದಿನ ಶಾಸ್ತ್ರ' ಎಂಬ ಕಿರುಗ್ರಂಥದ ಜಾಹೀರಾತಿನಿಂದ ಅದರ ಅಲ್ಪಪರಿಚಯವಾಗಬಹುದು.

# ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


**೧. ಕೂದಲಿನಲ್ಲಿ ಧರಿಸುವ ಆಭರಣಗಳು** **೨೨**

೧ ಅ. ತುರುಬಿನಲ್ಲಿ ಮತ್ತು ಜಡೆಯಲ್ಲಿ ಧರಿಸುವ ಆಭರಣಗಳು ೨೨

* ಚಿನ್ನದಿಂದ ತಯಾರಿಸಿದ ಸೂರ್ಯ ಮತ್ತು ಚಂದ್ರಗಳ ಪ್ರತೀಕಾತ್ಮಕ ಚಿತ್ರಗಳನ್ನು ತುರುಬಿನಲ್ಲಿ ಧರಿಸುವುದರಿಂದ ಯಾವ ಲಾಭಗಳಾಗುತ್ತವೆ? ೨೨

* ಮುತ್ತಿನ ಚೂಡಾಮಣಿಯನ್ನು ತುರುಬಿನಲ್ಲಿ ಧರಿಸುವುದರ ಬಗ್ಗೆ ಸಾಧಕಿಯು ಮಾಡಿದ ಸೂಕ್ಷ್ಮಜ್ಞಾನದ ಪ್ರಯೋಗ ೨೩

೧ ಆ. ಬೈತಲೆಯಲ್ಲಿ ಧರಿಸುವ ಅಲಂಕಾರ : ಬೈತಲೆಬೊಟ್ಟು ೩೧

* ಸ್ತ್ರೀಯರು ಬೈತಲೆಬೊಟ್ಟನ್ನು ಧರಿಸುವುದರಿಂದಾಗುವ ಸೂಕ್ಷ್ಮದಲ್ಲಿನ ಲಾಭಗಳನ್ನು ತೋರಿಸುವ ಚಿತ್ರ ೩೩

**೨. ಕುಂಕುಮ (ಸೌಭಾಗ್ಯಾಲಂಕಾರ)** **೩೫**

* ಕುಂಕುಮವನ್ನು ಹಚ್ಚಿಕೊಳ್ಳುವುದರ ಮಹತ್ವ ಮತ್ತು ಲಾಭಗಳು ೩೫

* ಸ್ತ್ರೀಯು ತನಗೆ ಕುಂಕುಮವನ್ನು ಹಚ್ಚಿಕೊಳ್ಳುವಾಗ ಬಲಗೈ ಅನಾಮಿಕಾದಿಂದ ಏಕೆ ಹಚ್ಚಿಕೊಳ್ಳಬೇಕು ? ೩೬

* ಓರ್ವ ಸ್ತ್ರೀಯು ಇತರ ಸ್ತ್ರೀಯರಿಗೆ ಕುಂಕುಮವನ್ನು ಹಚ್ಚುವಾಗ ಮಧ್ಯಮಾವನ್ನು ಏಕೆ ಉಪಯೋಗಿಸಬೇಕು ? ೩೮

* ಟಿಕಲಿಯನ್ನು ಹಚ್ಚಿಕೊಳ್ಳುವುದಕ್ಕಿಂತ ಕುಂಕುಮವನ್ನು ಹಚ್ಚಿಕೊಳ್ಳುವುದು ಏಕೆ ಹೆಚ್ಚು ಯೋಗ್ಯವಾಗಿದೆ ? ೩೯

* 'ಸನಾತನ' ಕುಂಕುಮ (ಸಾತ್ತ್ವಿಕ ಕುಂಕುಮ) ಮತ್ತು ಮೇಣ : ವೈಶಿಷ್ಟ್ಯ ಮತ್ತು ಅನುಭೂತಿಗಳು ೪೧

* ವಿಧವೆಯರು ಕುಂಕುಮವನ್ನು ಏಕೆ ಹಚ್ಚಿಕೊಳ್ಳಬಾರದು ? ೪೨

**೩. ಕಿವಿಗಳಲ್ಲಿ ಧರಿಸುವ ಆಭರಣಗಳು (ಕರ್ಣಾಭರಣ)** **೪೪**

* ಕಲಿಯುಗದಲ್ಲಿ ಕಿವಿಗಳಲ್ಲಿ ಆಭರಣಗಳನ್ನು ಧರಿಸುವುದು ಏಕೆ ಅವಶ್ಯಕವಾಗಿದೆ ? ೪೪

* ಕರ್ಣಕುಂಡಲ : ವಿವಿಧ ಪ್ರಕಾರದ ಚಿನ್ನದ ಮತ್ತು ಟೊಳ್ಳಿರುವ ಅರ್ಧಚಂದ್ರಾಕಾರದ ಕಿವಿಓಲೆಗಳನ್ನು ಧರಿಸಿ ಮಾಡಿದ ಸೂಕ್ಷ್ಮಜ್ಞಾನದ ಪ್ರಯೋಗ ೪೫

* ಲೋಲಾಕು : ಮಹತ್ವ ಮತ್ತು ವಿವಿಧ ಪ್ರಕಾರದ ಲೋಲಾಕುಗಳನ್ನು ಧರಿಸಿ ಮಾಡಿದ ಸೂಕ್ಷ್ಮಜ್ಞಾನದ ಪ್ರಯೋಗ ೪೯

* ಕುಂಡಲಗಳು (ಬೆಂಡೋಲೆ) : ಹೂವಿನ ಆಕಾರದ ವಜ್ರದ ಕುಂಡಲಗಳೆಡೆಗೆ ನೋಡಿ ಮಾಡಿದ ಸೂಕ್ಷ್ಮ ಪರೀಕ್ಷಣೆ ೫೩
* ಮುತ್ತುಗಳ ಕರ್ಣಪುಷ್ಪ ಮತ್ತು ಮಾವಿನಕಾಯಿ ಆಕಾರದ ಚಿನ್ನದ ಕರ್ಣಪುಷ್ಪಗಳನ್ನು ಕೈಯಲ್ಲಿ ಹಿಡಿದು ಮಾಡಿದ ಸೂಕ್ಷ್ಮ ಪರೀಕ್ಷಣೆ ೫೬
* ಸಾಧಕಿಯು ವಿವಿಧ ರೀತಿಯ ಸಾತ್ತ್ವಿಕ ವಿನ್ಯಾಸಗಳಿರುವ ಕರ್ಣಪುಷ್ಪಗಳನ್ನು ಧರಿಸಿ ಮಾಡಿದ ಸೂಕ್ಷ್ಮ ಜ್ಞಾನದ ಪ್ರಯೋಗಗಳು ೫೬
* ಕಿವಿಗಳ ಅಂಚಿನಲ್ಲಿ (ಕಡೆಗಳಲ್ಲಿ) ಒಂದಕ್ಕಿಂತ ಹೆಚ್ಚು ರಂಧ್ರಗಳನ್ನು ಮಾಡಿ ಅವುಗಳಲ್ಲಿ ಮೂಗುತಿಗಳಂತಹ ಆಭರಣಗಳನ್ನು ಧರಿಸುವುದು ಏಕೆ ಅಯೋಗ್ಯವಾಗಿದೆ ? ೬೦

**೪. ಮೂಗಿನಲ್ಲಿ ಧರಿಸುವ ಆಭರಣಗಳು ೬೨**

* ಮೂಗುತಿಯನ್ನು ಮುತ್ತುಗಳಿಂದ ಏಕೆ ತಯಾರಿಸುತ್ತಾರೆ ? ೬೪

**೫. ಸಾಧಕಿಯು ಚಿನ್ನದ ಸರವನ್ನು ಯಾವಾಗಲೂ ಹಾಕಿಕೊಳ್ಳುವ ಸ್ಥಳದಲ್ಲಿ ಧರಿಸದೇ ವಿವಿಧ ಆಭರಣಗಳನ್ನು ಧರಿಸುವ ಸ್ಥಳಗಳಲ್ಲಿ ಧರಿಸಿ ಮಾಡಿದ ಸೂಕ್ಷ್ಮ ಜ್ಞಾನದ ಪ್ರಯೋಗ ೭೩**

**೬. ಆಭರಣಗಳಿಗೆ ಸಂಬಂಧಿಸಿದ ದೇವತೆಗಳು, ದೇವತೆಯ ಕಾರ್ಯನಿರತ ಭಾವ, ಆಭರಣಗಳನ್ನು ಧರಿಸಿದವರ ಮತ್ತು ನೋಡುವವರಲ್ಲಿರುವ ಭಾವ ೭೫**

**೭. ಆಧ್ಯಾತ್ಮಿಕ ತೊಂದರೆಯಿರುವ ಮತ್ತು ಇಲ್ಲದಿರುವ ಜೀವಗಳು ಆಭರಣಗಳನ್ನು ಧರಿಸುವುದರಿಂದ ತಾರಕ ಮತ್ತು ಮಾರಕ ಸ್ತರದಲ್ಲಾಗುವ ಲಾಭಗಳು ೭೬**

**೮. ವಿವಿಧ ಆಭರಣಗಳಿಂದ ಜೀವಕ್ಕೆ ಬರುವ ಅನುಭೂತಿಗಳ ಪ್ರಮಾಣ ೭೬**

## ವಾಚಕರಿಗೆ ವಿನಂತಿ

ಕೆಲವು ವರ್ಷ ಸಾಧನೆ ಮಾಡಿದುದರಿಂದ ಸನಾತನದ ಕೆಲವು ಸಂತರಲ್ಲಿ ಮತ್ತು ಸಾಧಕರಲ್ಲಿ ವಿವಿಧ ವಿಷಯಗಳಲ್ಲಿ ಪ್ರತಿಭೆ ಜಾಗೃತವಾಗಿದೆ. ಈ ಪ್ರತಿಭೆಯ ಫಲಶ್ರುತಿಯೆಂದು ಅವರು ಪ್ರಸ್ತುತ ಗ್ರಂಥದಲ್ಲಿ ಕೆಲವು ಲೇಖನಗಳನ್ನು ಬರೆದಿದ್ದಾರೆ. ಆದ್ದರಿಂದ ಸಂಬಂಧಿತ ಲೇಖನದ ಮುಂದೆ ಅವರ ಹೆಸರನ್ನು ಕೊಡಲಾಗಿದೆ. ಹೆಚ್ಚಿನ ಲೇಖನಗಳಲ್ಲಿ ಅಧ್ಯಾತ್ಮದ ಆಳವಾದ ಸಿದ್ಧಾಂತಗಳನ್ನು ಸ್ಪಷ್ಟಪಡಿಸಲಾಗಿದೆ, ಆದ್ದರಿಂದ ಸ್ವಾಭಾವಿಕವಾಗಿಯೇ ಅದರ ಭಾಷೆ ಕೆಲವು ಕಡೆಗಳಲ್ಲಿ ಕಠಿಣವಾಗಿದೆ. ಹೀಗಿದ್ದರೂ ಈಶ್ವರನಲ್ಲಿ ಪ್ರಾರ್ಥನೆ ಮಾಡಿ ಮತ್ತು ಭಾವವನ್ನಿಟ್ಟು ಓದುವುದರಿಂದ, ಇದರಲ್ಲಿ ಅಡಕವಾಗಿರುವ ಜ್ಞಾನದ ಆನಂದವನ್ನು ವಾಚಕರು ಅವಶ್ಯವಾಗಿ ಅನುಭವಿಸಬಹುದು!